**ಶಿಲೆಯೊಳಗಣ ಪಾವಕನಂತೆ**
**ಉದಕದೊಳಗಣ ಪ್ರತಿಬಿಂಬದಂತೆ**
**ಬೀಜದೊಳಗಣ ವೃಕ್ಷದಂತೆ**
**ಶಬ್ದದೊಳಗಣ ನಿಶ್ಶಬ್ದದಂತೆ**
**ಗುಹೇಶ್ವರ, ನಿಮ್ಮ ಶರಣ ಸಂಬಂಧ**

**- ಅಲ್ಲಮಪ್ರಭು**

ಗ್ರಾಮಫೋನ್‌ನ ತಿರುಗಣೆಯ ಹಿಡಿಕೆಯಿಂದ ಚೆನ್ನಾಗಿ ತಿರುಗಿಸಿ (ವೈಂಡಿಂಗ್ ಮಾಡಿ) ಮೊನಚಾದ ಮುಳ್ಳನ್ನು (ಪ್ಲೇಯಿಂಗ್‌ಪಿನ್) ಗ್ರಾಮಫೋನ್ ರೆಕಾರ್ಡರ್‌ಗೆ (ಕೊಲಂಬಿಯಾ ರೆಕಾರ್ಡರ್) ತಾಕಿಸಿದಾಗ ಮಹಮ್ಮದ್ ರಫೀಯ 'ಏ ದುನಿಯಾ ಪತಂಗ್' ಗೀತೆಯು ಚುಸ್ ಎನ್ನುವ ಮತ್ತೊಂದು ಶಬ್ದದ ಜೊತೆಗೆ ನಿಧಾನವಾಗಿ ಹಾಡಲಾರಂಭಿಸಿದಾಗ ಮುಳಿಹುಲ್ಲಿನ ಮೂಲೆಯಂಗಡಿ ಕಂ ಹೋಟೆಲ್ ತನ್ನ ದೈನಂದಿನ ವ್ಯಾಪಾರಕ್ಕೆ ತೆರೆದುಕೊಂಡಿತು ಎಂದರ್ಥ.

ಅಗಲವಾದ ನಾಲ್ಕು ಆಯಾಮವಿರುವ ಮರದ ಪೆಟ್ಟಿಗೆಗೆ ಬಲಭಾಗದಲ್ಲೊಂದು ಹಿಡಿಕೆ. ತಾವರೆಯಂತೆ ಅರಳಿ ನಿಂತ ಲೌಡ್‌ಸ್ಪೀಕರ್. ಸವೆದುಹೋದ ಪ್ಲೇಯಿಂಗ್ ಪಿನ್. ಜೊತೆಗೊಂದಿಷ್ಟು ರೆಕಾರ್ಡರ್ ತಟ್ಟೆಗಳು. ಒಂದು ಕೊಲಂಬಿಯಾ ರೆಕಾರ್ಡರ್‌ನಲ್ಲಿ ಒಂದೇ ಒಂದು ಹಾಡು. ತಪ್ಪಿದರೆ ಎರಡು. ಹೆಚ್ಚು ಖಂಡಿತಾ ಇರಲಾರದು. ಹೋಟೆಲಿಗೆ ಮುಂಜಾನೆ ಟೀ,

